ಮಾಡಿ ಶೆಟ್ರು 'ಎಂತಾದ್ರೂ ಮಾಡಿ ಜಾಗ ಮಾರಿ ಅಪ್ಪನನ್ನು ಕರ್ಕೊಂಡೋಗಿ. ನಿಮಗೆ ಈಗ ಒಳ್ಳೆ ರೇಟು ಸಿಗ್ತದೆ. ನಮಗಿಂತ ಹೆಚ್ಚು ಸಿಗ್ತದೆ' ಅಂತ ಹೇಳ್ತಿದ್ರು. ಅವತ್ತು ಶ್ರೀಪತಿ ಭಟ್ರು ಕೊಡಲಿ ಹಿಡ್ಕೊಂಡು ಬಂದ ದಿವ್ಸವೂ ಶೆಟ್ರು ಇಬ್ರ ಮಕ್ಳಿಗೂ ಫೋನ್ ಮಾಡಿದ್ರು.

ಇಬ್ರು ಭಟ್ರುಗಳ ಮಕ್ಳೂ ಅವತ್ತು ಪೊಲ್ಯಕ್ಕೆ ಬಂದ್ರು. ಆ ದಿವ್ಸ ಶಿವರಾತ್ರಿ ಆಗಿತ್ತು. ಉಚ್ಚಿಲದ ಕೊಡಿಯೇರುವ ದಿನ. ನಂತ್ರ ಮೂರು ದಿವ್ಸಕ್ಕೆ ತೇರು. ಇಬ್ರೂ ಮೊದ್ಲೇ ಡಿಸೈಡ್ ಮಾಡಿಕೊಂಡೇ ಬಂದಿದ್ರು. ಅಪ್ಪಂದಿರಿಗೆ ಸರೀ ತಿಳಿಸಿ ಹೇಳಿ ಜಾಗ ಮಾರ್ಲಿಕ್ಕೆ ಒಪ್ಪಿಸಿದ್ರು. ರಘುರಾಂ ಭಟ್ರಿಗೆ ಯಂತ ಕಂಡಿತಾ ಏನ, ಒಪ್ಪಿದ್ರು. ಅವ್ರು ಒಪ್ಪಿದ್ರಿಂದ ಬಾಗೇರ್ತ್ಕಕ್ಕ, ಆ ಮೂಲಕ ಶ್ರೀಪತಿ ಭಟ್ರೂ ಒಪ್ಪಿದ್ರು. ಭುಜಂಗ ಶೆಟ್ರಿಗೆ ಆದ ಖುಷಿ ಅಷ್ಟಿಷ್ಟಲ್ಲ. ಕೂಡ್ಲೆ ಪ್ರವೀಣ ಫೋನ್ ಮಾಡಿ ಅಮೇರಿಕದ ಕಂಪನಿಯ ಆಫೀಸರುಗಳಿಗೆ ವಿಷಯ ತಿಳಿಸಿದ್ರು. ಎರಡು ವರ್ಷ ಲೇಟಾಗಿ ಕೊಟ್ಟಿದ್ದಕ್ಕೆ ಸೆಂಟ್ಸಿಗೆ ಎಂಟು ಲಕ್ಷದ ಹಾಗೆ ಬಂತು ಅಂತ ಇಬ್ರು ಭಟ್ರಿಗೂ ಖುಷಿಯಾಯ್ತು. ಭಟ್ರುಗಳ ಮಕ್ಳಿಬ್ರೂ ಪೇಪರ್‌ಗಳಿಗೆ ಅಪ್ಪಂದಿರ ಸೈನ್ ಹಾಕಿಸಿಕೊಂಡು ಇತ್ಯರ್ಥ ಮಾಡಿದ್ರು. ತೇರು ಮುಗಿದು ಮಾರಾಟ ಎಲ್ಲಾ ಆದ್ಮೇಲೆ ಭಟ್ರುಗಳಿಬ್ರೂ ಊರು ಬಿಟ್ರು.

* * *

ಶ್ರೀಪತಿ ಭಟ್ರಾಗಲೀ ರಘುರಾಂ ಭಟ್ರಾಗಲೀ ಮಠದ್ದು ಕೆಲ್ಸ ಯಂತಾದ್ರೂ ಇದ್ರೆ ಉಡುಪಿಗೆ ಬಿಟ್ರೆ ಪುರೈತಕ್ಕೆ ಮಂಗ್ಳೂರು ಕಡೆಗೆ ಮಾತ್ರ ಹೋದವರು. ಬೆಂಗ್ಳೂರು ಗಿಂಗ್ಳೂರು ಕಂಡವ್ರಲ್ಲ. ಮಗ ಸೊಸೆ ಬರ್ಲಿಕ್ಕೆ ಹೇಳಿ ಒತ್ತಾಯ ಮಾಡಿದಾಗ ತಮ್ಮ ತಮ್ಮ ಹೆಂಡತಿಯರನ್ನು ಕಳಿಸಿಕೊಟ್ಟಿದ್ರು. ಹಾಗಾಗಿ ಹೆಂಡತಿಯರಿಗೆ ಬೆಂಗ್ಳೂರಿನ ಬಗ್ಗೆ ಸ್ವಲ್ಪ ಸ್ವಲ್ಪ ಗೊತ್ತಿತ್ತು. ಭಟ್ರುಗಳಿಗೆ ಅಲ್ಲಿ ಹೋದ್ಮೆಲೆ ಒಂದು ಮಾಯಾ ನಗರಿಯ ಪರಿಚಯವಾಯ್ತು.

ಆರು ಗಂಟೆಗೇ ರಪಕ್ಕಂತ ಬಂದು ಬೀಳುವ ಪೇಪರ್, ಬಟನ್ ಒತ್ತಿದ ತಕ್ಷಣ ಬರುವ ಹಾಲು, ಮೊಮ್ಮಕ್ಕಳು ಗೂಗಲ್ ನೆಟ್‌ವರ್ಕನಲ್ಲಿ ಪೊಲ್ಯ ತೋರಿಸಿ ಇದು ನಮ್ಮೂರು ಅಂತ ಹೇಳಿದಾಗ ಭಟ್ರುಗಳು ರೋಮಾಂಚನಗೊಂಡಿದ್ದರು. ಇಬ್ರೂ ಭಟ್ರೂಗಳ ಮಕ್ಳೂ ವಿಜಯನಗರದ ಸೆಕೆಂಡ್ ಸ್ಟೇಜ್ನಲ್ಲಿ ಮನೆ ಮಾಡಿದ್ರು, ಅವ್ರಿಬ್ರ ಮನೆಗಳು ಹೆಚ್ಚು ದೂರ ಇರ್ಲಿಲ್ಲ. ಸಂಜೆ ಹೊತ್ತು ಬೇಜಾರಾದಾಗ ರಾಯರ ಮಠ, ಹನುಮಂತ ದೇವಸ್ಥಾನ, ಅಂತ ಹೋಗ್ಲಿಕ್ಕೆ ಸುರು ಮಾಡಿದ್ರು. ಆಗೆಲ್ಲ ಎದ್ರು ಬದ್ರಾದಾಗ ನೆಗ್ಯಾಡ್ತಿರ್ಲಿಲ್ಲ. ಆಮೇಲೆ ಶ್ರೀಪತಿ ಭಟ್ರು ನೆಗ್ಯಾಡ್ಲಿಕ್ಕೆ ಶುರು ಮಾಡಿದ್ರು. ರಘುರಾಂ ಭಟ್ರೂ ನೆಗ್ಯಾಡಿದ್ರು. ಕಡೆಗೆ ಮಾತುಕತೆ ಎಲ್ಲ ಶುರುವಾಯ್ತು.



ಫಸ್ಟಿಗೆ ಎಲ್ಲವು ಸರಿಯಾಗಿಯೇ ಇತ್ತು. ಒಂದು ತಿಂಗಳಾಗ್ತಾ ಬರ್ತಾ ಇದ್ದ ಹಾಗೇ ತಾವು ಬಂಗಾರದ ಪಂಜರದ ಒಳಗೆ ಇದ್ದೇವೆ ಅಂತ ಅನಿಸ್ಲಿಕ್ಕೆ ಸುರುವಾಯ್ತು. ಇಬ್ರೂ ಊರಲ್ಲಿದ್ದಾಗ ಕಂಡಾಬಟ್ಟೆ ಮಡಿ ಮಾಡಿಕೊಂಡಿದ್ದವ್ರು. ಆದ್ರೆ ಸೊಸೆ ಬರ್ಮುಡಾ, ತ್ರಿಫೋರ್ತ್, ಪ್ಯಾಂಟ್ ಅಂತೆಲ್ಲಾ ಹಾಕ್ಕೊಂಡು ತಿರುಗಾಡುದು ನೋಡಿ ಒಂದು ನಮೂನೆ ಆಗ್ಲಿಕ್ಕೆ ಸುರುವಾಯ್ತು. ತಮ್ಮ ಹೆಂಡತಿಯರ ಹತ್ರ ಹೇಳಿದ್ರು, ಅವ್ರು ಸೊಸೆಯಂದಿರನ್ನೇ ಸಪೋರ್ಟ ಮಾಡಿದ್ರು! ಆದಿತ್ಯವಾರ ಬಂದ್ರೆ ಗಂಟೆ ಒಂಭತ್ತಾದ್ರೂ ಮಗ ಸೊಸೆ ಏಳೂದೇ ಇಲ್ಲ. ರಘುರಾಮ ಭಟ್ರಿಗೆ ಆರು ಗಂಟೆಗೆಲ್ಲಾ ಕಾಫಿ ಬೇಕೇ ಬೇಕು. ಹೆಂಡತಿಯತ್ರ ಹೇಳಿದ್ರೆ 'ನೀವೇ ಗ್ಯಾಸ್ ಹಚ್ಚಿ ಮಾಡಿ ಕೊಳ್ಳಿ' ಎಂದು ಹೇಳುವಷ್ಟು ಧೈರ್ಯ ತೋರಿಸಿದ್ರು. ಶ್ರೀಪತಿ ಭಟ್ರಿಗೆ ಉರಿಮೂತ್ರದ ರೋಗ. ನೀರು ಜಾಸ್ತಿ ಕುಡೀಬೇಕಾಗಿತ್ತು. ತುಂಬಾ ನೀರು ಕುಡಿತಾ ಇರೋದನ್ನು ನೊಡಿದ ಸೊಸೆ 'ಮಾವಾ ಈಗ ಸಮ್ಮರ್... ನೀರು ವಾರಕ್ಕೋ ಫಿಫ್ಟೀನ್ ಡೇಸ್‌ಗೋ ಬರ್ತದೆ. ಕುಡಿಯುವ ನೀರನ್ನು ಪ್ರೈವೇಟ್ ಕಂಪೆನಿಯಿಂದ ತರಿಸ್ತಾ ಇದ್ದೇವೆ. ಕಂಡಾಬಟ್ಟೆ ಕಾಸ್ಟಿಲಿ' ಅಂತಾ ಹೇಳಿದ್ಲು. ಒಂದು ಆದಿತ್ಯವಾರ ರಘುರಾಂ ಭಟ್ರ ಮೊಮ್ಮಗ 'ನಂಗೆ ಆಮ್ಲೆಟ್ ಬೇಕೆ ಬೇಕು' ಅಂತ ಹಠ ಮಾಡ್ತಾ ಇದ್ದ. ಭಟ್ರು ಮಗನ ಹತ್ರ 'ಹಾಂಗಂದ್ರೆ ಯಂತ?' ಅಂತ ಕೇಳಿದ್ರು. ಅವ ಕಳ್ಳನ ಹಾಗೆ ಮುಖ ಮಾಡ್ತಾ ಹೆಂಡತಿಯ ಮುಖ ನೋಡ್ತಾ 'ಹಾಗಂದ್ರೆ ಮೊಟ್ಟೆದ್ದು ದೋಸೆ' ಅಂದ. ಸೊಸೆ ಯಂತದೂ ಆಗ್ಲೇ ಇಲ್ಲ ಅನ್ನುವ ಹಾಗೆ ಅಂಗಡಿಯಿಂದ ಮೊಟ್ಟೆ ತರ್ಸಿ ಮಗನಿಗೆ ಮಾಡಿಕೊಟ್ಟೇ ಬಿಟ್ಳು. ಮೊಮ್ಮಗ ತನ್ನ ಎದುರೇ ಮೊಟ್ಟೆ ದೋಸೆ ತಿನ್ತಾ ಇರೂದನ್ನು ನೋಡಿ ರಘುರಾಂ ಭಟ್ರು ಕಂಗಾಲಾದ್ರು. ವಾಸನೆಗೆ ಹೊಟ್ಟೆ ಎಲ್ಲ ತಳಮಳ ಆದ ಹಾಗೆ ಆಯ್ತು. ಶ್ರೀಪತಿ ಭಟ್ರ ಸೊಸೆ ಫೋನಿನಲ್ಲಿ 'ಅತ್ತೆ ಬಂದ ಮೇಲೆ ಮನೆ ಕೆಲಸಕ್ಕೆ ತುಂಬಾ ಹೆಲ್ಪ್ ಆಗ್ತಾ ಉಂಟು. ಮಾವನೇ ಎಂತಕ್ಕೂ ಉಪಯೋಗ ಇಲ್ಲ. ಅವ್ರನ್ನು ಎಂತಾದ್ರೂ ಕೆಲ್ಸ ಮಾಡ್ಲಿಕ್ಕೆ ಹೇಳ್ಬೇಕು' ಎಂತ ಹೇಳುದು ಕೇಳಿತು.

ಇಬ್ರೂ ಭಟ್ರುಗಳು ಈಗ ಸಂಜೆ ಮಠ ದೇವಸ್ಥಾನಗಳಲ್ಲಿ ಸಿಕ್ಕಿದಾಗ ಈ ವಿಷಯಗಳ ಬಗ್ಗೆ ಮಾತಾಡಿಕೊಳ್ಳಿಕ್ಕೆ ಸುರು ಮಾಡಿದ್ರು. ಹೀಗೆ ನೋಡ್ತಾ ನೋಡ್ತಾ ಮಳೆಗಾಲ, ಚಳಿಗಾಲ ಕಳೀತು. ಬೆಂಗ್ಳೂರಿನ ಕೆಟ್ಟ ಹವೆ ಶ್ರೀಪತಿ ಭಟ್ರಿಗೂ ಸರೀ ಹೊಂದಿಕೆ ಆಗ್ಲಿಲ್ಲ– ಹಾಗೇ ಕೃಷ್ಣವೇಣಿಯಕ್ಕನಿಗೂ. ಶಿವರಾತ್ರಿಗೆ ಒಂದು ವಾರ ಉಂಟು ಅನ್ನುವಾಗ ಇಬ್ರೂ ರಾಯರ ಮಠದಲ್ಲಿ ಕೂತ್ಕೊಂಡು 'ಇಲ್ಲಿದ್ದು ಮಗ ಸೊಸೆಗೆ ಸಸಾರ ಆಗೂದಕ್ಕಿಂತ ವಾಪಸ್ ಊರಿಗೆ ಹೋಗಿ ಸಣ್ಣ ಮನೆಯಲ್ಲಾದ್ರೂ ಸರಿ, ನೆಮ್ಮದಿಯಿಂದ ಇರುವ. ಹೇಗೂ ಜಾಗ ಮಾರಿ ಬಂದ ಹಣ ಉಂಟು' ಅಂತ ಮಾತಾಡಿಕೊಂಡ್ರು. ಹಾಗೇ ಮನೆಗೆ ಬಂದು ಇಬ್ರೂ ತಮ್ಮ ಮಕ್ಳ ಹತ್ರ ಹಣದ ವಿಷಯ ಕೇಳಿದ್ರು. 'ಅಪ್ಪಾ... ಜಾಗ ಮಾರಿ ಬಂದ ಹಣ, ನಮ್ಮ ಹೌಸಿಂಗ್ ಲೋನಿಗೆ, ಕಾರಿನ ಲೋನಿಗೆ, ಮಗಳ ಡೊನೇಷನ್, ಮಗನ ಕಂಪ್ಯೂಟರ್ ಅಂತ ಅಲ್ಲಿಗಲ್ಲಿಗೆ ಅಜೆಸ್ಟ್, ಸ್ವಲ್ಪ ಹಣದಲ್ಲಿ ಡೈಮಂಡ್ ನೆಕ್ಲೆಸ್ ಇವ್ಳಿಗೆ ಮಾಡ್ಸಿದ್ದೇನೆ. ಒಂದ ಸ್ವಲ್ಪ ನಿಮ್ಮಿಬ್ರ ಹೆಸ್ರಲ್ಲಿ ಡೆಪೋಸಿಟ್ ಇಟ್ಟಿದ್ದೇನೆ' ಎನ್ನುವ ಉತ್ತರ ರಘುರಾಂ ಭಟ್ರ ಮಗನಿಂದ ಬಂತು. ಶ್ರೀಪತಿ ಭಟ್ರ ಮಗನಿಂದಲೂ ಡಿಟ್ಟೊ ಡಿಟ್ಟೊ. ಒಂದು ಚೇಂಜ್ ಅಂದ್ರೆ, 'ಅಪ್ಪಾ ಈಗ ರಿಸಿಷನ್, ನಾನು ಹಿಂದಿನಷ್ಟು ಡ್ರಾ ಮಾಡ್ತಾ ಇಲ್ಲ. ಮಗನಿಗೆ ಮಗಳಿಗೆ ಬೇಕಾಗ್ತದೆ ಅಂತ ಅವ್ರಿಬ್ರ ಹೆಸ್ರಲ್ಲಿ ಎಫ್‌ಡಿ ಇಟ್ಟಿದ್ದೇನೆ. ಹೇಗಿದ್ರೂ ನಾಳೆ ನಿಮ್ಮ ಮಕ್ಳು ಮೊಮ್ಮಕ್ಳುಗಳಿಗೇ ಅಲ್ವಾ?' ಎನ್ನುವ ಹೆಚ್ಚುವರಿ ಡೈಲಾಗು. ಇಬ್ರಿಗೂ ಸಿಡ್ಲು ಹೊಡ್ದ ಹಾಗಾಯ್ತು. ಇಬ್ರೂ ಭಾರವಾದ ಮನಸ್ಸಿನಿಂದ ಶಿವರಾತ್ರಿಗೆ ನಡೀಲಿಕ್ಕಿದ್ದ ಉಚ್ಚಿಲದ ತೇರಿಗೆ ಅಂತ ಬಂದ್ರು.

* * *

ಇಬ್ರು ಭಟ್ರುಗಳು ಉಚ್ಚಿಲದ ಪೇಟೆಯಲ್ಲಿದ್ದ ಶಾಂತಣ್ಣನ ಮನೆಗೆ ಹೋಗುದು ಅಂತ ಎಣಿಸಿದ್ರು. ಬಸ್ಸು ಇಳ್ದ ಕೂಡ್ಲೆ ಮೊದ್ಲು ಪೊಲ್ಯ ನೋಡಿ ಬರುವ ಅಂತಾ ರಿಕ್ಷಾ ಮಾಡ್ಸಿಕೊಂಡು ಹೋದ್ರು. ಅಲ್ಲಿ ಹೋಗಿ ನೋಡ್ತಾರೆ ಎಂತ ಹೇಳುದು? ಇಡೀ ಪೊಲ್ಯಕ್ಕೆ ಪೊಲ್ಯವೇ ಸಪಾಟಾಗಿದೆ. ಒಂದು ಕಡೆ ಮಲ್ಲಾರಿನ ತಂಕ... ಇನ್ನೊಂದು ಕಡೆ ಮುದರಂಗಡಿ... ಮತ್ತೊಂದು ಕಡೆ ಕುಂಜೂರಿನ ತಂಕ ಸಪಾಟಾಗಿದೆ. ನೂರಾರು ಜೇಸಿಬಿಗಳು ಮಣ್ಣು ಗೋರಿ ಗೋರಿ ಹಾಕ್ತಾ ಇದ್ದಾವೆ. ಒಂದೇ ಒಂದು ಮರ ಇಲ್ಲ. ಕಂಡಾಬಟ್ಟೆ ಶಬ್ದ. ಎಲ್ಲಿಂದ್ಲೋ ದೇಶ ಭಾಷೆ ಗೊತ್ತಿಲ್ಲದ ಜನ ಕೆಲ್ಸ ಮಾಡ್ತಾ ಇದ್ರು. ಕಕ್ಕಾಬಿಕ್ಕಿಯಾದ ಅವ್ರಿಬ್ರಿಗೆ ತಮ್ಮ ಮನೆ, ತೋಟ ಲಡಾಯಿಗೆ ಕಾರಣ ಆಗಿದ್ದ ಹಲಸಿನ ಮರ ಎಲ್ಲಿತ್ತು ಅಂತಾ ಗುರ್ತವೇ ಆಗ್ಲಿಲ್ಲ. ಅಷ್ಟು ಹೊತ್ತಿಗೆ ಧೂಳು ಎಬ್ಬಿಸಿಕೊಂಡು ಒಂದು ಜೀಪು ಬಂತು. 'ಭಟ್ರೇ ನಮಸ್ಕಾರ' ಅಂತ ಹೇಳ್ತ ಒಬ್ಬ ಸೂಟು ಬೂಟು ಹಾಕ್ಕೊಂಡು ಕೆಳಗೆ ಇಳ್ದ. ಸರೀ ನೋಡಿದ್ರೆ ಪ್ರವೀಣ. 'ಭಟ್ರೇ ನಾನು... ಪ್ರವೀಣ... ನೀವು ಜಾಗ ಮಾರಿ ಹೋದ್ಮೇಲೆ ಕಂಪೆನಿಯವ್ರು ನನ್ನನ್ನ ಸೈಟಿನ ಲೇಬರ್ ಮ್ಯಾನೇಜರ್ ಮಾಡಿದ್ದಾರೆ. ಕೆಲ್ಸದವ್ರನ್ನ ಕರ್ಕೊಂಡು ಬರುದು, ವಾಪಾಸ್ ಕಳಿಸೂದು ಎಲ್ಲ ನಾನೇ. ಒಟ್ಟು ಮುನ್ನೂರು ಕೋಟಿ ರೂಪಾಯ್ದು ಪ್ರೋಜೆಕ್ಟ್ ಇಲ್ಲಿ ರೆಡಿಯಾಗ್ತಾ ಉಂಟು. ಡೆವಲಪ್‌ಮೆಂಟ್ ಅಂದ್ರೆ ಕಂಡಾಬಟ್ಟೆ ಡೆವಲಪ್‌ಮೆಂಟ್. ನೀವು ಹೇಗೆ ಬಂದ್ರಿ? ಆಟೋದಲ್ಲಿಯಾ? ವಾಪಸ್ ನಾನೇ ನಿಮ್ಮ ಪೇಟೆ ತಂಕಾ ಡ್ರಾಪ್ ಕೊಡ್ತೇನೆ' ಅಂತ ಹೇಳಿದ. ಭಟ್ರುಗಳು ಎಂಥದೂ ಹೇಳದೆ ಅವ್ನ ಜೀಪು ಹತ್ತಿ ಪೇಟೆಗೆ ಶಾಂತಣ್ಣನ ಮನೆಗೆ ಬಂದ್ರು.

ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಧ್ವಜಾರೋಹಣವೆಲ್ಲಾ ನೋಡಿದ್ರು. ದೇವ್ರಿಗೆ ಕೈಮುಗ್ದ್ರು. ಮಧ್ಯಾಹ್ನ ಶಾಂತಣ್ಣನ ಹೆಂಡತಿ ಕಡುಬು ಕಾಯಿಹಾಲು ಮಾಡಿದ್ರು. ಊಟ ಮಾಡ್ತಾ ಇರುವಾಗ ದಢಾರ್ ಅಂತ ಬಾಗಿಲು ಸೌಂಡಾಯ್ತು. ತೂರಾಡಿಕೊಂಡು ಶಾಂತಣ್ಣನ ಮಗ ಒಳಗೆ ಬಂದು ಬಾಯಿಗೆ ಬಂದ ಹಾಗೆ ಮಾತಾಡ್ಲಿಕ್ಕೆ ಸುರು ಮಾಡಿದ. ಶಾಂತಣ್ಣ ಕಣ್ಣಲ್ಲಿ ನೀರು ತುಂಬಿಕೊಂಡು, 'ಇವ ಒಬ್ಬ ನನ್ನ ಹೊಟ್ಟೆ ಉರಿಸ್ಲಿಕ್ಕೆ ಎಂತಕ್ಕೆ ಹುಟ್ಟಿದ್ನೋ ಏನೋ. ನಾನೂ ನಿಮ್ಮ ಹಾಗೆ ಜಾಗ ಮಾರಿ ಬಂದ ಹಣ ತಕ್ಕೊಂಡು ಬೆಂಗ್ಳೂರಿಗೆ ಬರ್ಬೇಕಾಗಿತ್ತು. ನೀವು ನಿಮ್ಮ ಮಕ್ಕಳ ಆರೈಕೆಯಲ್ಲಿ ಚೆನ್ನಾಗಿ ಇದ್ದೀರಿ. ಅಲ್ಲಿ ನಿಮಗೆ ಎಂತಾ ಕೊರ್ತೇನೂ ಆಗೂದಿಲ್ಲ. ಇಲ್ಲಿ ನೋಡಿ ದಿನಕ್ಕೆ ಹದ್ನೈದು ಗಂಟೆ ಕರೆಂಟಿಲ್ಲ, ಕರೆಂಟಿದ್ರೆ ನೀರಿಲ್ಲ, ಕಂಪೆನಿಯವ್ರು ದುಡ್ಡು ಕೊಟ್ಟಿದ್ದು ಈ ಬೋಳಿ ಮಗ್ನಿಗೆ ಗೊತ್ತುಂಟು. ದಿನಾ ಕುಡೀತಾನೆ, ಇಸ್ಪೀಟಾಡ್ತಾನೆ, ಖರ್ಚು ಮಾಡ್ತಾನೆ. ನಿಮ್ಮ ಮಕ್ಳ ಹಾಗೆ ಒಳ್ಳೆ ವಿದ್ಯೆ ಬುದ್ದಿ ಇವ್ನಿಗೆ ದಕ್ಕಿಲ್ಲ. ಎಲ್ಲ ಹಾಳಾಗ್ಲಿ ನನ್ನ ಕರ್ಮ. ನೀವು ಸುಖವಾಗಿ ಇದ್ದೀರಿ ಅಲ್ವಾ?' ಅಂತ ಕೇಳಿದ್ರು. ಕಡ್ಬು ಒಮ್ಮೆಲೆ ಗಂಟ್ಲಲ್ಲಿ ಸಿಕ್ಕಿದ ಹಾಗಾಗಿ ರಘುರಾಂ ಭಟ್ರು ಕಂಡಾಬಟ್ಟೆ ಕೆಮ್ಮಿದ್ರು. ಕೆಮ್ಮಿ ಕೆಮ್ಮಿ ಅವ್ರಿಗೆ ಕಣ್ಣಲ್ಲಿ ನೀರು ಬಂತು. ಸ್ವರ ಸರಿ ಮಾಡಿಕೊಳ್ಳಿಕ್ಕೆ ಅಂತ ಮೇಲೆ ನೋಡಿದ್ರು. ಶ್ರೀಪತಿ ಭಟ್ರು ಸುಮ್ನೆ ತಲೆ ತಗ್ಗಿಸಿ ಕಡುಬು ಕಾಯಿಹಾಲು ಕಲೆಸ್ತಾ ಇದ್ರು. ಗೊತ್ತಿಲ್ದೇ ಒಂದೆರಡು ಹನಿ ಕಣ್ಣಿಂದ ಅವ್ರ ಎಲೆಗೆ ಬಿತ್ತು.

■